Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

# ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 27/2021

ಪ್ರಾ.ಸಾ. 6 ಚಾ.ಸಾ. 2

| | | |
|---|---|---|
| ಹೆಸರು | : | ಭೀಮರೆಡ್ಡಿ |
| ತಂದೆಯ ಹೆಸರು | : | ಯಂಕಾರೆಡ್ಡಿ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಮುದ್ನಾಳ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 27-05-2026

ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಚಾಸಾ-3 ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು ಅವರು ನಮ್ಮ ಊರಿನವರು. ಚಾಸಾ-11 ಗೊತ್ತಿಲ್ಲ. ಈ ಪ್ರಕರಣದಲ್ಲಿ ನನ್ನ ಸಮಕ್ಷಮ ಪೊಲೀಸರು ಯಾವುದೇ ಜಪ್ತಿ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತು ಜಪ್ತಿ ಪಡಿಸಿಕೊಂಡಿರುವುದಿಲ್ಲ ಸಾಕ್ಷಿಗೆ ನಿಪಿ 4 ಪಂಚನಾಮೆ ತೋರಿಸಿ ಸಹಿ ಗುರುತಿಸಿದ್ದು ಅದನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 5 ರಿಂದ 12 ಭಾವಚಿತ್ರಗಳನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ನಿ.ಪಿ.4 ರಲ್ಲಿ ಬರೆದ ವಿಷಯ ಗೊತ್ತಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ</u>

2. ದಿಃ 30.03.2021 ರಂದು ಸಾಯಂಕಾಲ 4-00 ರಿಂದ 5-00 ಗಂಟೆಯವರೆಗೆ ನನಗೆ ಮತ್ತು ಚಸಾ-3 ಶರಣು ಅವರಿಗೆ ಆರೋಪಿತನ ಮನೆಯ ಹಿಂಬಾಗ ಕರೆಸಿದ್ದು ಪರಿಶೀಲಿಸಿದಾಗ ಆತನ ವಶದಿಂದ 1) 1 ಕೆ.ಜಿ. 300 ಗ್ರಾಮ್ ತೂಕದ 3 ಹಸಿ ಗಾಂಜಾದ ಗಿಡಗಳು, 2) 300 ಗ್ರಾಮ ತೂಕದ ಒಂದು ಪ್ಲಾಸ್ಟಿಕ ಚೀಲದಲ್ಲಿ ಒಣಗಿದ ಗಾಂಜಾ, 3) ಸದರಿ ಎರಡು ನಮೂನೆಯ ಗಾಂಜಾದಲ್ಲಿ ತಲಾ 2 ಕಾದದ ಪುಡಿಯಲ್ಲಿ 100 ಗ್ರಾಮ್ ಗಾಂಜಾವನ್ನು ಎಫ್.ಎಸ್.ಎಲ್. ಕಳುಹಿಸುವ ಸಲುವಾಗಿ ಪ್ರತ್ಯೇಕವಾಗಿ ಜಪ್ತಿ ಮಾಡಿಕೊಂಡಿದ್ದು ಇರುತ್ತದೆ. 4) ಗಾಂಜಾ ಮಾರಾಟ ಮಾಡಿದ ನಗದು ಹಣ ರೂ. 830/-, 5) ಒಂದು ಗಾಂಜಾ ಸೇವನೆ ಮಾಡಲು ಉಪಯೋಗಿಸುವ ಚುಲುವೆ ಇವುಗಳನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.4 ರಂತೆ ಪಂಚನಾಮೆ ಮಾಡಿ ಜಪ್ತಿ ಪಂಚನಾಮೆ ಮಾಡಿ ಆ ಕಾಲಕ್ಕೆ ನಿ.ಪಿ.5 ರಿಂದ 12 ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ,

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಮ್.ವಿ.ಕೆ ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.